ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೊಡಗು, ಮಡಿಕೇರಿ

ಸಿ.ಸಿ. :230/2024

ಪಿ.ಡಬ್ಲ್ಯು: 3

ಸಿ.ಡಬ್ಲ್ಯು: 5

| | |
|---|---|
| ಸಾಕ್ಷಿದಾರರ ಹೆಸರು | ಸುನೀಲ್ ಬಿ.ಓ |
| ತಂದೆಯ ಹೆಸರು | ಓಂಕಾರ ಮೂರ್ತಿ ಬಿ.ಎಂ |
| ಪ್ರಾಯ | **34** ವರ್ಷ |
| ಉದ್ಯೋಗ | ಪಿ.ಸಿ.**01** ಗ್ರಾಮಾಂತರ ಪೊಲೀಸ್ ಠಾಣೆ, ಕುಶಾಲನಗರ |
| ವಾಸಸ್ಥಳ | ಕುಶಾಲನಗರ |

**ದಿ:29.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಹಿಸಸಅಭಿಯೋಜಕರವರಿಂದ:**

ನಾನು **2018** ರಿಂದ **2024** ರವರಿಗೆ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿ:02.06.2024 ರಂದು ನಾನು ಠಾಣೆಯಲ್ಲಿ ಕರ್ತವ್ಯ ನಿರತನಾಗಿದ್ದಾಗ ಸಂಜೆ 7.20 ಗಂಟೆಗೆ ಚಾಸಾ 1 ರವರು ನನ್ನನ್ನು ಚಾಸಾ 4 ರವರನ್ನು ಕರೆದು ಓಂಕಾರೇಶ್ವರ ದೇವಸ್ಥಾನದ ರಸ್ತೆಯಲ್ಲಿ ಅಬಕಾರಿ ದಾಳಿ ಇದೆ ಹೋಗೋಣ ಎಂದು ತಿಳಿಸಿದರು. ನಂತರ ಚಾಸಾ 2 ಮತ್ತು 3 ರವರನ್ನು ಚಾಸಾ 1 ರವರು ಠಾಣೆಗೆ ಕರೆಸಿ ಅವರಿಗೆ ಮಾಹಿತಿ ತಿಳಿಸಿ ದಾಳಿಗೆ ಸಹಕರಿಸುವಂತೆ ಕೇಳಿದರು. ಸದರಿಯವರು ಒಪ್ಪಿದ ಮೇರೆಗೆ ಅವರಿಗೆ ನೋಟೀಸ್ಸು ನೀಡಲಾಯಿತು. ಆ ನಂತರ ಇಲಾಖಾ ಜೀಪಿನಲ್ಲಿ ಚಾಸಾ 1 ರಿಂದ 3, ನಾನು ಮತ್ತು 4 ಎಂ.ಎಂ.ವೃತ್ತದಿಂದ ಓಂಕಾರೇಶ್ವರ ದೇವಸ್ಥಾನಕ್ಕೆ

ಹೋಗುವ ರಸ್ತೆಯಲ್ಲಿ ಇರುವ ತೆರಿಗೆ ಇಲಾಖೆಯ ಜಂಕ್ಷಣ ಬಳಿ ಹೋದೇವು. ನಾವು ಹಿಡಿದು ನೋಡಲಾಗಿ ಅಲ್ಲಿ ಒಬ್ಬ ಆಸಾಮಿ ನೀಲಿ ಬಣ್ಣದ ಬಟ್ಟೆ ಬ್ಯಾಗಲ್ಲಿ ಏನೊ ತುಂಬಿಕೊಂಡು ನಿಂತಿದ್ದು ನಮ್ಮನ್ನು ನೋಡಿ ಆತ ಓಡಲು ಪ್ರಯತ್ನ ಪಟ್ಟ ಆಗ ನಾನು ಮತ್ತು ಚಾಸಾ 4 ರವರು ಸೇರಿ ಆತತನ್ನು ಹಿಡಿದು ಚಾಸಾ 1 ರವರ ಮುಂದೆ ಹಾಜರು ಮಾಡಿದೇವು. ಚಾಸಾ 1 ರವರು ಆತನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಆತನ ಹೆಸರು ಪುರುಷೋತ್ತಮ ಮತ್ತು ವಾಸ ನಾರ್ತ ಕೂರ್ಗ ಕ್ಲಬ್ ನ ವಸತಿ ಗೃಹದಲ್ಲಿ ವಾಸವಿದ್ದೇನೆ ಎಂದು ತಿಳಿಸಿದ. ಆತನ ಕೈಯಲ್ಲಿ ಇದ್ದ ಬ್ಯಾಗನ್ನು ಪಂಚರ ಸಮಕ್ಷಮದಲ್ಲಿ ಪರಿಶೀಲಿಸಲಾಗಿ ಅದರಲ್ಲಿ 180 ಎಂ.ಎಲ್ ನ ಬಿಜಾಯ್ಸ್ ಎಂದು ಬರೆದಿದ್ದ 10 ಟೆಟ್ರಾ ಪ್ಯಾಕಗಳು ಇದ್ದವು. ಆತನ ಅಂಗಶೋಧನೆ ಮಾಡಲಾಗಿ ಆತನ ಬಲ ಪ್ಯಾಂಟಿನ ಜೇಬಿನಲ್ಲಿ ಮದ್ಯಮಾರಾಟ ಮಾಡಿ ಬಂದಿದ್ದ 100/- ರೂ ಮುಖಬೆಲೆಯ 6 ನೋಟುಗಳು ಇದ್ದವು. ಸದರಿ ಮಾಲುಗಳನ್ನು ಸ್ವಾಧೀನ ಹೊಂದಲು ಪರವಾನಿಗೆ ಇದೇಯಾ ಎಂದು ಕೇಳಲಾಗಿ ಆರೋಪಿ ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲ ಮತ್ತು ಸದರಿ ಮಾಲನ್ನು ಮಾರಾಟ ಮಾಡುವ ಉದ್ದೇಶದಿಂದ ಸ್ವಾಧೀನ ಹೊಂದಿದ್ದೇನೆ ಎಂದು ತಿಳಿಸಿದ. ಆರೋಪಿಯ ಕೃತ್ಯ ಅಬಕಾರಿ ಕಾಯಿದೆ ಉಲ್ಲಂಘನೆಯಾಗಿದ್ದು, ಆತನ ಸ್ವಾಧೀನದಲ್ಲಿ ಇದ್ದ 10 ಬಿಜಾಯ್ಸು ಟೆಟ್ರಾ ಪ್ಯಾಕಗಳನ್ನು ಮತ್ತು ಆರೋಪಿ ಸ್ವಾಧೀನದಲ್ಲಿ ಇದ್ದ ಬ್ಯಾಗನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ T ಎಂಬ ಇಂಗ್ಲೀಷ ಅಕ್ಷರದಿಂದ ಮೋಹರು

ಮಾಡಿದೇವು. ಆರೋಪಿ ಸ್ವಾಧೀನದಲ್ಲಿ ಇದ್ದ ಹಣವನ್ನು ಒಂದು ಖಾಕಿ ಲಕೋಟೆಗೆ ಹಾಕಿ ಅದನ್ನು ಸಹ ಮೊಾಹರು ಮಾಡಿದೇವು. ಮಾಲು ಮತ್ತು ಆರೋಪಿಯನ್ನು ವಶಕ್ಕೆ ಪಡೆದು ರಾತ್ರಿ 8.15 ರಿಂದ 9.35 ಗಂಟೆಯವರಿಗೆ ಮಹಜರ ಬರೆದೇವು. ಮಹಜರ್ ಗೆ ಚಾಸಾ 1 ರಿಂದ 3 ನಾನು ಮತ್ತು ಚಾಸಾ 4 ರವರು ಸಹಿ ಮಾಡಿದೆರುತ್ತೇವೆ. ಮಹಜರ್ ಕಾಲಕ್ಕೆ ಠಾಣಾ ಸೋನಿ ಡಿಜಿಟಲ್ ಹ್ಯಾಂಡಿ ಕ್ಯಾಮರಾ ಮುಖಾಂತರ ಸ್ಥಳದ ಫೋಟೊ ತೆಗೆದೆ. ಸಾಕ್ಷಿಗೆ ಮಹಜರ್ ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಮಹಜರ್ ಕಾಲಕ್ಕೆ ತೆಗೆದು ಫೋಟೊವನ್ನು ನೋಡಿ ಗುರುತಿಸಿದ್ದೇನೆ. ಅದನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದೆ. ನಿಪಿ.3 ರಲ್ಲಿ ಕಾಣುವ ಸ್ಥಳ ಘಟನಾ ಸ್ಥಳವಾಗಿದ್ದು ಅದರಲ್ಲಿ ಚಾಸಾ 1 ರಿಂದ 4 ಮತ್ತು ಆರೋಪಿ ಇದ್ದಾರೆ. ನಿಪಿ.3 ರಲ್ಲಿ ಕಾಣುವಂತೆ ಆರೋಪಿ ಕೈನಲ್ಲಿ ಅಮಾನತು ಪಡಿಸಿದ ಮಾಲು ಇದೆ. ನಾನು ತನಿಖಾಧಿಕಾರಿ ಮುಂದೆ ಘಟನೆ ಸಂಬಂಧ ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿ ನ್ಯಾಯಾಲಯದ ಮುಂದೆ ಇದ್ದು ಆತನನ್ನು ನೋಡಿ ಗುರುತಿಸಿದ್ದೇನೆ. ಆ ದಿನ ಅಮಾನತು ಪಡಿಸಿದ ಮಾಲು ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ನೋಡಿ ಗುರುತಿಸಿದ್ದೇನೆ. ಅವು ಈಗಾಗಲೇ ಮು.ಮ.1 ರಿಂದ 12 ಎಂದು ಗುರುತಿಸಲಾಗಿದೆ.

3. ದಿಃ28.06.2024 ರಂದು ಠಾಣಾ ಕ್ಯಾಮರಾ ಸಹಾಯದಿಂದ ಸ್ಥಳದಲ್ಲಿ ತೆಗೆದ ಫೋಟೋವನ್ನು ಠಾಣೆಯ ಎಸಾರ್ ಕಂಪ್ಯೂಟರ್ ಸಹಾಯದಿಂದ ಫೋಟೋಗಳನ್ನು ವರ್ಗಾಯಿಸಿಕೊಂಡು ಕೆನಾನ್ ಪ್ರಿಂಟರ್ ಸಹಾಯದಿಂದ ನಿಪಿ.3 ನ್ನು ಪ್ರಿಂಟ್ ಹಾಕಿರುತ್ತೇನೆ. ಈ ಸಂಬಂಧ ನಾನು ಚಾಸಾ 8 ರವರ ಮುಂದೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.65 ಬಿ ರಿತ್ಯ ದೃಢೀಕರಣ ಪತ್ರ ಕೊಟ್ಟಿರುತ್ತೇನೆ. ಸಾಕ್ಷಿಗೆ ದೃಢೀಕರಣ ಪತ್ರವನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ.6 ಎಂದು  ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎನ್.ಎಸ್.ಎಸ್. ವಕೀಲರಿಂದ</u>**

ಚಾಸಾ 1 ರವರು ನನಗೆ ಮತ್ತು ಚಾಸಾ 4 ರವರಿಗೆ ಸ್ಥಳಕ್ಕೆ ಹೋಗಲು ಸಂಜೆ 7.45 ಗಂಟೆಗೆ ತಯಾರು ಇರುವಂತೆ ಹೇಳಿದ್ದರು. ನಮಗೆ ಮಾಹಿತಿ ಕೊಟ್ಟ ಕಾಲಕ್ಕೆ ಚಾಸಾ 1 ರವರು ಠಾಣೆಯಲ್ಲೆ ಇದ್ದರು. ಚಾಸಾ 1 ರವರು ನನ್ನನ್ನು ಮತ್ತು ಚಾಸಾ 4 ರವರನ್ನು ದಾಳಿಗೆ ಕರೆದಾಗ ಚಾಸಾ 2 ಮತ್ತು 3 ರವರು ಎಲ್ಲಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಚಾಸಾ 2 ಮತ್ತು 3 ರವರು ಸಂಜೆ 7.45 ಗಂಟೆ ಸುಮಾರಿಗೆ ಠಾಣೆಗೆ ಬಂದರು. ನನ್ನ ಮತ್ತು ಚಾಸಾ 4 ರವರ ಸಮಕ್ಷಮದಲ್ಲಿ ಚಾಸಾ 2 ಮತ್ತು 3 ರವರಿಗೆ ಯಾವುದೇ ವಿವರಣೆ ಕೊಟ್ಟಿಲ್ಲ. ನನ್ನ  ಸಮಕ್ಷಮದಲ್ಲಿ ಚಾಸಾ 1 ರವರು ಚಾಸಾ 2 ಮತ್ತು 3 ರವರಿಗೆ

ನೋಟೀಸ್ಸು ಕೊಟ್ಟಿಲ್ಲ. ಸ್ಥಳಕ್ಕೆ ಎಷ್ಟು ಗಂಟೆಗೆ ತಲುಪಿದ್ದರಿ ಎಂದರೆ ಸಾಕ್ಷಿ ರಾತ್ರಿ 8.00 ಗಂಟೆಗೆ ಸ್ಥಳ ತಲುಪಿದೇವು ಎನ್ನುತ್ತಾರೆ. ಠಾಣೆಯಿಂದ ನಿಮ್ಮನ್ನು ಸೇರಿಸಿ ಸ್ಥಳಕ್ಕೆ ಎಷ್ಟು ಜನ ಹೋದರಿ ಎಂದರೆ ಸಾಕ್ಷಿ ಚಾಲಕ ಮತ್ತು ಪಂಚಸಾಕ್ಷಿಗಳನ್ನು ಸೇರಿ ಒಟ್ಟು 7 ಜನ ಸ್ಥಳಕ್ಕೆ ಹೋದೇವು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನಾನು, ಚಾಸಾ 1 ರಿಂದ 4, ಜೀಪ ಚಾಲಕ ಮತ್ತು ಮಹಿಳಾ ಸಿಬ್ಬಂದಿ ಮಾಲೀನಿ ಹೋಗಿದ್ದೇವು ಎನ್ನುತ್ತಾರೆ. ನಾನು ಸ್ಥಳಕ್ಕೆ ಹೋದೇವು ಎನ್ನುವ ಕಾಲಕ್ಕೆ ಆರೋಪಿ ಬಳಿ ಯಾರಾದರೂ ಗಿರಾಕಿ ಇದ್ದರಾ ಎಂದರೆ ಸಾಕ್ಷಿ ನಾವು ಹೋದಾಗ ಯಾರೂ ಇರಲಿಲ್ಲ ಎನ್ನುತ್ತಾರೆ. ನಮ್ಮ ವಾಹನ ತೆರಿಗೆ ಇಲಾಖೆಯ ಕಚೇರಿ ಜಂಕ್ಷಣಲ್ಲಿ ನಿಲ್ಲಿಸಿದ್ದೇವು. ಆದಾಯ ತೆರಿಗೆ ಇಲಾಖಾ ಕಚೇರಿಯ ಮುಖ್ಯ ದ್ವಾರಾ ಪಶ್ಚಿಮಕ್ಕೆ ಇದೆ ಎಂದರೆ ಸರಿ. ಘಟನೆ ನಡೆಯಿತು ಎನ್ನುವ ಸ್ಥಳದ ಅಜು–ಬಾಜಿನಲ್ಲಿ ಹೊಟೇಲ್ , ವಾಸದ ಮನೆಗಳು ಮತ್ತು ಇತರ ಅಂಗಡಿ ಮುಗ್ಗಟ್ಟುಗಳು ಇವೆ ಎಂದರೆ ಸರಿ. ಓಂಕಾರೇಶ್ವರ ದೇವಸ್ಥಾನದ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಮತ್ತು ಜನರು ಓಡಾಡುತ್ತಿರುತ್ತಾರೆ ಎಂದರೆ ಸಾಕ್ಷಿ ವಿರಳವಾಗಿ ಓಡಾಡುತ್ತಾರೆ ಎನ್ನುತ್ತಾರೆ. ಘಟನೆ ಪೂರ್ವದಲ್ಲಿ ಆರೋಪಿಯ ಮುಖ ಪರಿಚಯ ಇತ್ತು. ಸಾಕ್ಷಿ ಮುಂದುವರೆದು ಆದರೆ ಅವರು ಮಾತನಾಡಿ ಪರಿಚಯ ಇರಲಿಲ್ಲ ಎನ್ನುತ್ತಾರೆ. ನಿಮ್ಮನ್ನು ನೋಡಿ ಆರೋಪಿ ಓಡಲು ಪ್ರಯತ್ನ ಪಟ್ಟ ಎಂದರೆ ಸಾಕ್ಷಿ ಜೀಪನ್ನು ನೋಡಿ ಓಡಲು ಪ್ರಯತ್ನ ಪಟ್ಟ ಆಗ ನಾವು ಹಿಡಿದೇವು ಎನ್ನುತ್ತಾರೆ. ಆರೋಪಿ ನಮ್ಮನ್ನು ನೋಡಿ ಸುಮಾರು 10 ರಿಂದ 15 ಮೀಟರ್

ದೂರ ಓಡಲು ಪ್ರಯತ್ನ ಪಟ್ಟರು. ಆತ ಯಾವ ದಿಕ್ಕಿಗೆ ಓಡಲು ಪ್ರಯತ್ನ ಪಟ್ಟ ಎಂದರೆ ಸಾಕ್ಷಿ ಜಂಕ್ಷಣ ಕಡೆ ಓಡಲು ಪ್ರಯತ್ನ ಪಟ್ಟಿದ್ದರು ಎನ್ನುತ್ತಾರೆ. ಆರೋಪಿ ಓಂಕಾರೇಶ್ವರ ದೇವಸ್ಥಾನದ ರಸ್ತೆಯಿಂದ ಕೆಳಗೆ ಹೋಗುವ ರಸ್ತೆ ಕಡೆ ಓಡಲು ಪ್ರಯತ್ನ ಪಟ್ಟರು. ಆರೋಪಿಯನ್ನು ನಾನು, ಚಾಸಾ 1 ಮತ್ತು 4 ಸುತ್ತುವರೆದು ಹಿಡಿದೇವು. 15 ಮೀಟರ್ ದೂರ ಎಂದರೆ ಓಂಕಾರೇಶ್ವರ ದೇವಸ್ಥಾನದ ರಸ್ತೆಯಿಂದ ಆದಾಯ ತೆರಿಗೆ ಕಚೇರಿ ಇರುವ ಮುಂಭಾಗದ ಸ್ಥಳ. ಆರೋಪಿಯನ್ನು ಮೊದಲು ಚಾಸಾ 1 ರವರು ಮಾತನಾಡಿಸಿದರು. ನಾನು ಆಗ ಆರೋಪಿಯನ್ನು ಹಿಡಿದುಕೊಂಡಿದ್ದೆ. ಆರೋಪಿಯನ್ನು ಹಿಡಿದು ತರಲು ಸುಮಾರು 15 ನಿಮೀಷ ಸಮಯ ಬೇಕಾಗಿತ್ತು. ಆ ವೇಳೆಯಲ್ಲಿ ಸ್ಥಳದಲ್ಲಿ ಸಾರ್ವಜನಿಕರು ಓಡಾಡಿರುತ್ತಾರೆ. ಆರೋಪಿ ಜೇಬಿನಲ್ಲಿ ಇದ್ದ ಹಣವನ್ನು ಯಾರೂ ತೆಗೆದರು ಎಂದರೆ ಸಾಕ್ಷಿ ಆತನೇ ಹಣವನ್ನು ತೆಗೆದು ಹಾಜರು ಮಾಡಿದರು ಎನ್ನುತ್ತಾರೆ. ಆ ದಿನ ಆರೋಪಿ ಕಪ್ಪು ಬಣ್ಣದ ಪ್ಯಾಂಟ ಧರಿಸಿದ್ದರು. ಮಹಜರ್ ನ್ನು WPC ಮಾಲೀನಿ ಬರೆದರು. ಸದರಿಯವರು ಜೇಪ್ ಬೆಳಕಿನ ಸಹಾಯದಿಂದ ಜೀಪಿನ ಮುಂಭಾಗ ಮಹಜರ್ ಬರೆದರು. ನಾನು ಫೋಟೊವನ್ನು ಠಾಣಾ ಸೋನಿ ಡಿಜಿಟಲ್ ಹ್ಯಾಂಡಿಕ್ಯಾಮರಾ ಮುಖಾಂತರ ತೆಗೆದಿದ್ದೇನೆ. ದಾಳಿಗೆ ಹೊರಡುವ ಪೂರ್ವದಲ್ಲಿ ಠಾಣಾ ಹ್ಯಾಂಡಿಕ್ಯಾಮರಾ ಠಾಣಾ ಬರಹಗಾರರ ಬಳಿ ಇತ್ತು. ಆ ದಿನ ಠಾಣಾ ಬರಹಗಾರರು ಮುತ್ತಣ್ಣ ಆಗಿದ್ದರು. ಸಾಕ್ಷಿ ಮುಂದುವರೆದು ಠಾಣಾ ಹ್ಯಾಂಡಿಕ್ಯಾಮರಾವನ್ನು ಜೀಪಿನಲ್ಲೆ ಸ್ಥಳಕ್ಕೆ ತೆಗೆದುಕೊಂಡು ಹೋಗಲಾಗಿತ್ತು ಎನ್ನುತ್ತಾರೆ.

ಮುತ್ತಣ್ಣ ಇವರಿಂದ ಠಾಣಾ ಕ್ಯಾಮರಾವನ್ನು ನಾನೇ ಪಡೆದು ಸ್ಥಳಕ್ಕೆ ತೆಗೆದುಕೊಂಡು ಹೋದೆ. ನಾನು ಸ್ಥಳದಲ್ಲಿ ಒಂದು ಫೋಟೊ ಮಾತ್ರ ತೆಗೆದಿದ್ದೇನೆ. ಮುತ್ತಣ್ಣ ಇವರಿಂದ ಕ್ಯಾಮರಾ ಪಡೆದುಕೊಂಡು ಸ್ಥಳಕ್ಕೆ ಹೋಗಿದ್ದೆ ಎಂದು ಇದೇ ಮೊದಲ ಭಾರಿ ಹೇಳಿದ್ದೇನೆ ಎಂದರೆ ಸರಿ. ನಾನು ಸ್ಥಳದಲ್ಲಿ ಫೋಟೊ ತೆಗೆದಿದ್ದೇನೆ ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆ ರೀತಿ ನೀವು ಹೇಳಿಕೆಯಲ್ಲಿ ಹೇಳಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುತ್ತಣ್ಣ ಇವರಿಂದ ಕ್ಯಾಮರಾ ಪಡೆದಿದ್ದೆ ಎಂಬ ವಿಚಾರವನ್ನು ನಿಪಿ.6 ರಲ್ಲಿ ನಮೂದು ಮಾಡಿಲ್ಲ. ಠಾಣಾ ಹ್ಯಾಂಡಿಕ್ಯಾಮರಾ ಒಟ್ಟು 16 ಜಿ.ಬಿ. ಸಾಮರ್ಥ್ಯದ್ದಾಗಿತ್ತು. ಒಟ್ಟು ಸಾಮರ್ಥ್ಯದ ಪೈಕಿ ಅದಾಗಲೇ ಎಷ್ಟು ಜಿ.ಬಿ ಉಪಯೋಗಿಸಲಾಗಿತ್ತು ಮತ್ತು ಭಾಕಿ ಎಷ್ಟು ಜಿ.ಬಿ ಇತ್ತು ಎಂದರೆ ಸಾಕ್ಷಿ ಅದನ್ನು ಗಮನಿಸಿಲ್ಲ ಎನ್ನುತ್ತಾರೆ. ಕ್ಯಾಮರಾವನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪಯೋಗಿಸಿದ ನಂತರ ವಾಪಸ್ಸು ಮುತ್ತಣ್ಣ ಇವರ ಕೈಗೆ ಕೊಟ್ಟಿದ್ದೇನೆ. ದಿಃ28.06.2024 ರಂದು ನಿಪಿ.3 ರ ಫೋಟೊವನ್ನು ಪ್ರಿಂಟ್ ಹಾಕಿರುತ್ತೇನೆ. ಅದುವರೆಗೆ ಕ್ಯಾಮರಾ ಮುತ್ತಣ್ಣನವರ ಬಳಿ ಇತ್ತು ಮತ್ತು ದಿಃ28.06.2024 ರಂದು ಅವರಿಂದ ಪಡೆದು ನಿಪಿ.3 ನ್ನು ಪ್ರಿಂಟ್ ಹಾಕಿದ್ದೇನೆ ಎದು ನಿಪಿ.6 ರಲ್ಲಿ ಹೇಳಿಲ್ಲ. ನನಗೆ ಡಿಜಿಟಲ್ ಕ್ಯಾಮರಾ ಆಪರೆಟ್ ಮಾಡಲು ತರಬೇತಿ ಇದೆ ಮತ್ತು ಫೋಟೊ ಪ್ರಿಂಟ್ ಹಾಕಲು ಕೌಶಲ್ಯ ಇದೆ ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಹಾಜರು ಮಾಡಿಲ್ಲ. ದಿಃ28.06.2024 ರಂದು ನಿಪಿ.3 ರ

ಫೋಟೊ ಮಾತ್ರ ಪ್ರಿಂಟ್ ಹಾಕಿದ್ದೇನೆ. ಠಾಣೆಯಲ್ಲಿ ಇದ್ದ ಎಸರ್ ಕಂಪ್ಯೂಟರ್ ಮತ್ತು ಕೆನಾನ್ ಪ್ರಿಂಟರ್ ಸುಸ್ಥಿತಿಯಲ್ಲಿ ಇದ್ದವು ಎಂದು ದೃಢೀಕರಣ ಪತ್ರ ಪಡೆದ್ದೀರಾ ಎಂದರೆ ಸಾಕ್ಷಿ ನಾನು ಪರೀಕ್ಷಿಸಿದಾಗ ಅವು ಸುಸ್ಥಿತಿಯಲ್ಲಿ ಇದ್ದವು ಹಾಗಾಗಿ ಫೋಟೊ ಪ್ರಿಂಟ್ ಹಾಕಿದೆ ಎನ್ನುತ್ತಾರೆ. ಸೋನಿ ಹ್ಯಾಂಡಿಕ್ಯಾಮರವನುನ ಎಸರ್ ಕಂಪ್ಯೂಟರ್ ಮತ್ತು ಕೆನಾನ್ ಪ್ರಿಂಟರ್ ಗೆ ಕೆಬಲ್ ಮುಖಾಂತರ ಸಂಪರ್ಕಿಸಲಾಯಿತೊ ಅಥವಾ ಯಾವುದಾದರೂ ಸಾಪ್ಟವೇರ್ ಉಪಯೋಗಿಸಲಾಯಿತೊ ಎಂಬುದನ್ನು ನಿಪಿ.6 ರಲ್ಲಿ ಹೇಳಿಲ್ಲ ಎಂದರೆ ಸರಿ. ನಿಪಿ.6 ರ ಒಕ್ಕಣೆಯನ್ನು ನಾನೇ ಹೇಳಿದ್ದೇನೆ. ಅದನ್ನು ಯಾರು ಬೆರಳಚ್ಚು ಮಾಡಿದರು ಎಂದು ಈಗ ನೆನಪಿಲ್ಲ. ನಿಪಿ.6 ರ ಮೇಲೆ ಯಾವ ಕಾರಣಕ್ಕಾಗಿ ಕೈನಲ್ಲಿ ದಿನಾಂಕ ಬರೆಯಲಾಗಿದೆ ಎಂದರೆ ಸಾಕ್ಷಿ ಈಗ ನೆನಪಿಲ್ಲ ಎನ್ನುತ್ತಾರೆ. ನಾನು ನಿಪಿ.6 ರ ಮೇಲೆ ಸಹಿ ಮಾಡಿದ ಕಾಲಕ್ಕೆ ದಿನಾಂಕ ನಮೂದು ಮಾಡಲಾಗಿತ್ತು. ನಿಪಿ.6 ನ್ನು ನನಗೆ ಸಹಿ ಮಾಡಲು ಅದನ್ನು ಟೈಪ ಮಾಡಿದವರೂ ಕೊಟ್ಟರು ಅವರ ಹೆಸರು ಈಗ ನೆನಪಿಲ್ಲ ಎನ್ನುತ್ತಾರೆ. ತನಿಖಾಧಿಕಾರಿ ಮುಂದೆ ಕೊಡಲಾಗಿದೆ ಎಂದು ಹೇಳಲಾದ ನಿಮ್ಮ ಹೇಳಿಕೆಯ ಮೇಲೂ ಸಹ ದಿನಾಂಕವನ್ನು ತಿದ್ದಿ ಕೈನಲ್ಲಿ ಯಾರು ಬರೆದರು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಿಪಿ.3 ರಲ್ಲಿ **WPC** ಮಾಲೀನಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿಯವರು ಜೀಪಿನ ಮುಂದೆ ಇದ್ದರು ಹಾಗಾಗಿ ನಿಪಿ.3 ರ ಫೋಟೊದಲ್ಲಿ ಬಂದಿಲ್ಲ ಎನ್ನುತ್ತಾರೆ. ನಿಪಿ.3 ರಲ್ಲಿ ಆದಾಯ ತೆರಿಗೆ ಕಚೇರಿಯ ಬೊರ್ಡ್ ಕಾಣಿಸುತ್ತಿಲ್ಲ ಎಂದರೆ ಸಾಕ್ಷಿ ಅದು ಇಳಿಜಾರಿನಲ್ಲಿ ಇದೆ

ಎನ್ನುತ್ತಾರೆ. ಆ ದಿನ ನಾನಾಗಲಿ, ಚಾಸಾ 1 ರವರಗಾಗಲಿ ಅಥವಾ ಚಾಸಾ 4 ರವರಾಗಲಿ ಹಾಗೂ ಮಾಲೀನಿಯವರಾಗಲಿ ಘಟನೆ ನಡೆಯಿತು ಎನ್ನುವ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಸ್ಥಳಕ್ಕೆ ಹೋಗದೇ ಇದ್ದರು ನಿಪಿ.6 ನ್ನು ಸುಳ್ಳಾಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ನೀಲಿ ಬಣ್ಣದ ಬಟ್ಟೆ ಬ್ಯಾಗ ಇಲ್ಲ ಎಂದರೆ ಸಾಕ್ಷಿ ನ್ಯಾಯಾಲಯದ ಮುಂದೆ ನಿಲಿ ಬಣ್ಣದ ಪ್ಲಾಸ್ಟಿಕ್ ಚೀಲ ಇದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿ ಕುತ್ತಿಗೆಗೆ ಒಂದು ಬ್ಯಾಗನ್ನು ಹಾಕಿಕೊಂಡಿದ್ದರು ಎನ್ನುತ್ತಾರೆ. ಆರೋಪಿ ಕುತ್ತಿಗೆಗೆ ಹಾಕಿಕೊಂಡಿದ್ದರು ಎಂದು ಹೇಳಲಾದ ಬ್ಯಾಗು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಅಮಾನತು ಪಡಿಸಿಲಾಯಿತು ಎಂದು ಹೇಳಲಾದ ನೋಟುಗಳ ವಿವರಣೆಯನ್ನು ಮಹಜರ್ ನಲ್ಲಿ ಬರೆದಿಲ್ಲ. ನಾನು ಸಹ ನೋಟಿನ ವಿವರಣೆಯ ಬಗ್ಗೆ ಹೇಳಿಕೆಯಲ್ಲಿ ಹೇಳಿಲ್ಲ. ನಿಪಿ.3 ನ್ನು ಆದಾಯ ತೆರಿಗೆ ಕಚೇರಿಯ ಬಳಿ ತೆಗೆದಿಲ್ಲ ಅದನ್ನು ನಮ್ಮ ಠಾಣೆಯ ಬಳಿ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಚಾಸಾ 2 ರವರು ನನಗೆ ವೈಯಕ್ತಿಕ ಪರಿಚಯ ಇಲ್ಲ. ಸದರಿಯವರು ಚಾಸಾ 1 ರವರಿಗೆ ಪರಿಚಯ ಇರಬಹುದು. ಚಾಸಾ 2 ರವರು ಚಾಸಾ 1 ರವರಿಗೆ ಪರಿಚಯ ಇದ್ದ ಕಾರಣ ಅವರಿಗೆ ಫೋನ್ ಕರೆ ಮಾಡಿ ಪಂಚಸಾಕ್ಷಿಗಳನ್ನಾಗಿಸಿಕೊಂಡಿರುತ್ತಾರೆ ಎಂದರೆ ಇರಬಹುದು ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಚಾಸಾ 2 ರವರ ಉದ್ಯೋಗದ ಬಗ್ಗೆ ನನಗೆ

ಮಾಹಿತಿ ಇಲ್ಲ. ಆರೋಪಿ ಉದ್ಯೋಗದ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿ ಬಸ್ ಏಜೆಂಟ್ ಆಗಿ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಆರೋಪಿ ಬಸ್ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದೂ ಚಾಸಾ 2 ರವರಿಗೆ ಅವರ ಬಗ್ಗೆ ವಿಶ್ವಾಸ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಆ ಕಾರಣಕ್ಕಾಗಿ ಚಾಸಾ 2 ರವರು ಚಾಸಾ 1 ರವರನ್ನು ಉಪಯೋಗಿಸಿಕೊಂಡು ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ನಿಮಗೆ ಮಾಹಿತಿ ಇದ್ದರು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.6 ರ ಮೇಲೆ ದಿನಾಂಕವನ್ನು ಕೈಬರವಣಿಗೆ ಮುಖಾಂತರ ಮಾಡಿರುವ ವಿಚಾರ ನಾನು ಅದರ ಮೇಲೆ ಸಹಿ ಮಾಡಿದಾಗಲೆ ಗೊತ್ತಿತ್ತು. ನಾನು ಸದರಿ ಸ್ಥಳದಲ್ಲಿ ಯಾವುದೇ ಮೇಲ್ರುಜು ಹಾಕಿಲ್ಲ. ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡುವ ಉದ್ದೇಶದಿಂದ ನಿಪಿ.3, 6 ಮತ್ತು ನನ್ನ ಹೇಳಿಕೆಯನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿಯೊಂದು ಮದ್ಯದ ಬಾಟಲಿ ಮತ್ತು ಟೆಟ್ರಾಪ್ಯಾಕಗಳ ಮೇಲೆ ಬಾರ್ ಕೋಡ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಜೊತೆಯಲ್ಲೆ ಕ್ರಮ ಸಂಖ್ಯೆ ಇರುತ್ತದೆ ಎನ್ನುತ್ತಾರೆ. ಬಾರ್ ಕೋಡನ್ನು ಸ್ಕ್ಯಾನ್ ಮಾಡಿದರೆ ಸದರಿ ಮಾಲು ಯಾವ ಬಾರ್ ಅಥವಾ ಮದ್ಯದ ಅಂಗಡಿಗೆ ಸರಬರಾಜು ಆಗಿದೆ ಎಂದು ಕಂಡುಕೊಳ್ಳಬಹುದು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮು.ಮ.1 ರಿಂದ 12 ನ್ನು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡುವ ಉದ್ದೇಶದಿಂದ ಸೃಷ್ಟಿ

ಮಡಿದ್ದೇವೆ ಎಂದರೆ ಸರಿಯಲ್ಲ. ಮು.ಮ.1 ರಿಂದ 12 ನ್ನು ಚಾಸಾ 2 ರವರೆ ತಂದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಆತನ ವಿರುದ್ದ ಸುಳ್ಳು ಸಾಕ್ಷ್ಯನುಡಿದಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.